ಶ್ರೀ ಹೆಚ್.ಡಿ. ಬಸವರಾಜು :– ನೀವೂ ಕೇಳಿ. ಬೇಡ ಎನ್ನುವುದಿಲ್ಲ. ಅವರು ಅಧಿಕಾರ ನಡೆಸಿದುದನ್ನು ನಾವು ನೋಡಿಲ್ಲವೇ? ಅವರಲ್ಲಿ ಎಷ್ಟು ಜನ ಮಂತ್ರಿಗಳು ಬರುತ್ತಿದ್ದರು ಎಂದು ನಾವು ನೋಡಿಲ್ಲವೇ?

(ಗೊಂದಲ)

ಉಪಾಧ್ಯಕ್ಷರು :– ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು :– ಕೇಳಬೇಕಾದರೂ ಒಂದು ಅರ್ಥ ಬೇಕಲ್ಲವೇ? ಯಾರು ಯಾರನ್ನು ಕೇಳುವುದು? ಇಲ್ಲಿ ಕುಳಿತಾಗ ಒಂದು ಮಾತು, ಅಲ್ಲಿ ಕುಳಿತಾಗ ಒಂದು ಮಾತೇ? ಇದು ಸಂಪ್ರದಾಯವಲ್ಲ. ನೀವು ಈ ಕಡೆ ಕುಳಿತಾಗ ಏನು ಮಾಡಿದ್ದಿರೋ, ಅದನ್ನೇ ನಾವು ಮಾಡುತ್ತಿರುವುದು.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಹೆಚ್.ಡಿ. ಬಸವರಾಜು :– ಸುಮ್ಮನೇ ಬರೀ ಆರೋಪ, ಬರೀ ಮಾತಿಗೋಸ್ಕರ ಮಾತನಾಡುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು :– ಬಸವರಾಜುರವರೇ, ಒಂದು ನಿಮಿಷ .....

ಶ್ರೀ ಕೆ. ಶ್ರೀನಿವಾಸಗೌಡ :– ಅವರೂ ನಮಗೆ ಬೆಂಬಲ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಅವರು ಇಲ್ಲಿ ಕುಳಿತಿದ್ದಾಗ, ಇಲ್ಲಿ ಎಷ್ಟು ಜನ ಮಂತ್ರಿಗಳಿರುತ್ತಿದ್ದರು ಎನ್ನುವುದು ನಮಗೆ ಗೊತ್ತಿಲ್ಲವೇ?

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :– ಆಫೀಸರ್ಸ್ ಗ್ಯಾಲರಿಯಲ್ಲಿ ಆಫೀಸರ್ಸ್ ಯಾರೂ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಅವರನ್ನು ಸ್ವಲ್ಪ ಬೇಗ ಕರೆಸಿ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಅವರನ್ನು ಕರೆಸುತ್ತಿದ್ದೀರಲ್ಲವೇ? ಎಲ್ಲಿದ್ದಾರೆ ಅವರು?

ಉಪಾಧ್ಯಕ್ಷರು : ಚೀಫ್ ವಿಪ್ ಎಲ್ಲಿ ಹೋದರು?

ಶ್ರೀ ವಾಟಾಳ್ ನಾಗರಾಜ್ :– ಅವರನ್ನು ಕರೆಸುವುದಕ್ಕೆ ಎಲ್ಲಿಗೆ ಹೇಳಿ ಕಳುಹಿಸಿದ್ದೀರಿ? ಎಲ್ಲಿದ್ದಾರೆ ಅವರು? ಇಲ್ಲಿ ಒಬ್ಬರನ್ನು ಸಚೇತಕರು ಎಂದು ವ್ಯವಸ್ಥೆ ಮಾಡಿದ್ದಾರೆ. ಅವರ ಕರ್ತವ್ಯವೇನು?

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಮಾನ್ಯ ವಾಟಾಳರೇ, ಒಂದು ನಿಮಿಷ, ಮಾನ್ಯ ಉಪಾಧ್ಯಕ್ಷರೇ, ತಾವು ಲಂಚ್‌ಗೆ ಬ್ರೇಕ್ ಮಾಡುವುದಕ್ಕೆ ಮೊದಲು ಮೂರು ಗಂಟೆಗೆ ಸದನ ಸೇರಲಿದೆ

ಎಂದು ಹೇಳಿದ್ದಿರಿ. ಬೆಲ್ ಹಾಕಿದ ತಕ್ಷಣ ಅಧಿವೇಶನದಲ್ಲಿ ಹಾಜರಿರುವುದು ನಮ್ಮ ಕರ್ತವ್ಯ. ಏಕೆ ಪ್ರತಿ ದಿವಸ ಇಂಥ ಪ್ರಸಂಗಗಳಿಗೆ ಅವಕಾಶಕೊಡುತ್ತೀರಿ?

(ಈ ಹಂತದಲ್ಲಿ ಉಪ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು ಸದನಕ್ಕೆ ಆಗಮಿಸಿದರು)

ಉಪಾಧ್ಯಕ್ಷರು : ಬಂದರಲ್ಲಾ, ಟೆನ್ ಮಿನಿಟ್ಸ್ ಲೇಟ್‌ಆಗಿ ಬಂದಿದ್ದಾರೆ. ಈಗ ಒಂದು ಪ್ರಕಟಣೆ ಇದೆ.

6. ಪ್ರಕಟಣೆ

ವಿಷಯ: ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಷರೀದ್ ಮತ್ತು ಶ್ರೀ ಎಂ.ಟಿ.ಬಿ. ನಾಗರಾಜು ಅವರುಗಳಿಗೆ ಪ್ರಸಕ್ತ ಅಧಿವೇಶನದಲ್ಲಿ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಉಪಾಧ್ಯಕ್ಷರು : ದಿನಾಂಕ 16–3–2006ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದಲ್ಲಿ ಅನಾರೋಗ್ಯದ ಕಾರಣದಿಂದ, ಅಧಿವೇಶನ ಮುಕ್ತಾಯವಾಗುವವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡುವಂತೆ ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಫರೀದ್ ಹಾಗೂ ಎಂ.ಟಿ.ಬಿ. ನಾಗರಾಜು ಅವರುಗಳು ಕೋರಿರುತ್ತಾರೆ.

ಉಪಾಧ್ಯಕ್ಷರು : ಈಗ ಮಾನ್ಯ ಮಾಧುಸ್ವಾಮಿಯವರು.

ಮಾನ್ಯ ಸದಸ್ಯರುಗಳು ಗೈರುಹಾಜರಾಗಲು ಸದನವು ಸಮ್ಮತಿಸುತ್ತದೆಯೇ?

ಸದನವು ಒಪ್ಪಿಗೆ ಸೂಚಿಸಿತು

ಉಪಾಧ್ಯಕ್ಷರು : ಮಾನ್ಯ ಸದಸ್ಯರುಗಳ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

7. ವಿತ್ತೀಯ ಕಾರ್ಯಕಲಾಪ

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ:

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) (ಮುಂದುವರೆದ ಭಾಷಣ) : ಮಾನ್ಯ ಉಪಾಧ್ಯಕ್ಷರೇ, ನಾನು ತೋಟಗಾರಿಕಾ ಬೆಳೆಗಳ ಬಗ್ಗೆ ಮಾತನಾಡುತ್ತಾ, ತೆಂಗಿನ ಬಗ್ಗೆ ಹೇಳುತ್ತಿದ್ದೆ. ತೆಂಗಿನ ರೋಗ ನಿಯಂತ್ರಣಕ್ಕೆ ಸರ್ಕಾರ ಮಾಡಿರುವಂಥ ಕಾರ್ಯಕ್ರಮ ಅತ್ಯಲ್ಪ. ಈ ಕಡೆ ಹೆಚ್ಚು ಗಮನ ಕೊಡಬೇಕಾಗಿತ್ತು. 44 ಲಕ್ಷದ 89 ಸಾವಿರ ಎಕರೆ ಪ್ರದೇಶದಲ್ಲಿರುವಂಥ ತೆಂಗಿನ ನುಸಿ ರೋಗ ನಿವಾರಣೆಗೆ 24 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದರೆ ಅದರ ಗತಿಯೇನಾಗಬೇಕು? ಎರಡನೆಯದಾಗಿ, ಈಗ ತೆಂಗಿಗೆ ಬೆಲೆ ಬಹಳ ಕುಸಿದುಬಿಟ್ಟಿದೆ. ಇದು ಸನ್ಮಾನ್ಯ ಯಡಿಯೂರಪ್ಪನವರಿಗೆ ಗೊತ್ತೋ, ಇಲ್ಲವೊ? ಒಂಬತ್ತು ಸಾವಿರ ರೂಪಾಯಿಗಳಿದ್ದ ಕೊಬ್ಬರಿ ಧಾರಣೆ ಐದೂಮುಕ್ಕಾಲು ಸಾವಿರಕ್ಕೆ ಇಳಿದಿದೆ. ಮಾರ್ಕೆಟ್ ಇಂಟರ್‌ವೆನ್‌ಷನ್ ಆಗುತ್ತೇವೆ. ನಾವು ಸಪೋರ್ಟ್ ಪ್ರೈಸ್ ಕೊಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಈವರೆಗೆ ಕೊಬ್ಬರಿ ಬಗ್ಗೆ ಏನೂ